Akashvani : Bangalore
National Bulletin In Kannada
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

26.08.2024 13.10 hrs

<><*<><>*><>

ಮುಖ್ಯಾಂಶಗಳು

- ಜಮ್ಮು- ಕಾಶ್ಮೀರ ವಿಧಾನಸಭಾ ಚುನಾವಣೆಗೆ ಇಂದು ಬಿಜೆಪಿಯಿಂದ ೪೪ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ
- ಸಿಂಗಾಪುರದಲ್ಲಿಂದು ಭಾರತ-ಸಿಂಗಾಪುರ ಸಚಿವರ ೨ನೇ ದುಂಡುಮೇಜಿನ ಸಭೆ ; ದ್ವಿಪಕ್ಷೀಯ ಸಂಬಂಧ ಬಲವರ್ಧನೆ ಬಗ್ಗೆ ಚರ್ಚೆ
- ದೇಶಾದ್ಯಂತ ಇಂದು ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ; ದೇವಾಲಯಗಳಲ್ಲಿ ಭಕ್ತರಿಂದ ವಿಶೇಷ ಪೂಜೆ
- ಇದೇ ೨೮ರಿಂದ ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟ ; ಚಿಯರ್ ೪ ಭಾರತ್ ಮೂಲಕ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಕ್ರೀಡಾ ಸಚಿವರಿಂದ ಕರೆ
- ನ್ಯೂಯಾರ್ಕ್ ನಲ್ಲಿ ಇಂದಿನಿಂದ ಯುಎಸ್ ಓಪನ್ ಟೆನಿಸ್ ಟೂರ್ನಿ ಆರಂಭ; ಶುಭಾರಂಭದ ನಿರೀಕ್ಷೆಯಲ್ಲಿ ಸುಮಿತ್, ರೋಹನ್ ಬೋಪಣ್ಣ

<><*<><>*><>

ಮುಂಬರುವ ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಗೆ ಬಿಜೆಪಿ ಇಂದು ೪೪ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಶೋಪಿಯಾನ್ ನಿಂದ ಜಾವೇದ್ ಅಹ್ಮದ್ ಖಾದ್ರಿ, ರಾಜ್ ಪೋರಾದಿಂದ ಅರ್ಷಿದ್ ಭಟ್, ಅನಂತ್ ನಾಗ್ ಪಶ್ಚಿಮದಿಂದ ಮೊಹಮ್ಮದ್ ರಫೀಕ್ ವಾನಿ, ಅನಂತ್ ನಾಗ್ ನಿಂದ ವಕೀಲ ಸೈಯದ್ ವಜಾಹತ್, ಕಿಶ್ತ್ವಾರ್ ನಿಂದ ಸುಶ್ರೀಶಗುನ್ ಪರಿಹಾರ್ ಮತ್ತು ದೋಡಾದಿಂದ ಗಜಯ್ ಸಿಂಗ್ ರಾಣಾ ಅವರಿಗೆ ಪಕ್ಷ ಟಿಕೆಟ್ ನೀಡಿದೆ. ರಂಬನ್ ಕ್ಷೇತ್ರದಿಂದ ರಾಕೇಶ್ ಠಾಕೂರ್, ಬನಿಹಾಲ್ ನಿಂದ ಸಲೀಂ ಭಟ್, ರಿಯಾಸಿಯಿಂದ ಕುಲದೀಪ್ ರಾಜ್ ದುಬೆ ಮತ್ತು ಮಾತಾ ವೈಷ್ಣೋ ದೇವಿ ಕ್ಷೇತ್ರದಿಂದ ರೋಹಿತ್ ದುಬೆ ಸ್ಪರ್ಧಿಸಲಿದ್ದಾರೆ. ಉಧಂಪುರ ಪಶ್ಚಿಮದಿಂದ ಪವನ್ ಗುಪ್ತಾ, ಜಮ್ಮು ಪೂರ್ವದಿಂದ ಯುಧ್ವೀರ್ ಸೇಥಿ, ಜಮ್ಮು ಪಶ್ಚಿಮದಿಂದ ಅರವಿಂದ್ ಗುಪ್ತಾ ಮತ್ತು ಜಮ್ಮು ಉತ್ತರದಿಂದ ಶಾಮ್ ಲಾಲ್ ಶರ್ಮಾ ಅವರಿಗೆ ಟಿಕೆಟ್ ನೀಡಲಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆಗೆ ಮುಂದಿನ ತಿಂಗಳು ೧೮ ರಿಂದ ಮೂರು ಹಂತಗಳಲ್ಲಿ ನಡೆಯಲಿದೆ. ಜಮ್ಮು ಮತ್ತು ಕಾಶ್ಮೀರದ ೯೦ ಸದಸ್ಯರ ವಿಧಾನಸಭಾ ಕ್ಷೇತ್ರಗಳಿಗೆ ಅಕ್ಟೋಬರ್ ೪ ರಂದು ಮತ ಎಣಿಕೆ ನಡೆಯಲಿದೆ.

<><*<><>*><>

ಕೇಂದ್ರಾಡಳಿತ ಪ್ರದೇಶವಾದ ಲಡಾಖ್ ನಲ್ಲಿ ಜನ್ಸ್ಕರ್, ಡ್ರಾಸ್, ಶಾಮ್, ನುಬ್ರಾ ಮತ್ತು ಚಾಂಗ್ಥಾಂಗ್ ಎಂಬ ಐದು ಹೊಸ ಜಿಲ್ಲೆಗಳನ್ನು ರಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಅಭಿವೃದ್ಧಿ ಹೊಂದಿದ ಮತ್ತು ಸಮೃದ್ಧ ಲಡಾಖ್ ಅನ್ನು ನಿರ್ಮಿಸುವ ಪ್ರಧಾನಿ ನರೇಂದ್ರ ಮೋದಿಯವರ ದೃಷ್ಟಿಕೋನವನ್ನು ಅನುಸರಿಸಿ ಕೇಂದ್ರಾಡಳಿತ ಪ್ರದೇಶದಲ್ಲಿ ಐದು ಹೊಸ ಜಿಲ್ಲೆಗಳನ್ನು ರಚಿಸಲು ಗೃಹ ಸಚಿವಾಲಯ ನಿರ್ಧರಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಸಾಮಾಜಿಕ ಮಾಧ್ಯಮ ಪೋಸ್ಟ್ ನಲ್ಲಿ ತಿಳಿಸಿದ್ದಾರೆ. ಹೊಸ ಜಿಲ್ಲೆಗಳು ಪ್ರತಿ ಮೂಲೆ ಮೂಲೆಯಲ್ಲಿ ಆಡಳಿತವನ್ನು ಜಾರಿಗೊಳಿಸುವ ಮೂಲಕ ಜನರಿಗೆ ಮೀಸಲಾಗಿರುವ ಪ್ರಯೋಜನಗಳನ್ನು ಅವರ ಮನೆ ಬಾಗಿಲಿಗೆ ಕೊಂಡೊಯ್ಯುತ್ತವೆ ಎಂದು ಅವರು ಹೇಳಿದ್ದಾರೆ. ಇದೇ ವೇಳೆ ಅವರು ಲಡಾಖ್ ಜನರಿಗೆ ವಿಪುಲ ಅವಕಾಶಗಳನ್ನು ಸೃಷ್ಟಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

<><*<><>*><>

ಉಭಯ ದೇಶಗಳ ನಡುವಿನ ವ್ಯಾಪಾರ ಮತ್ತು ಆರ್ಥಿಕ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುವ ಗುರಿ ಹೊಂದಿರುವ ಭಾರತ - ಸಿಂಗಾಪುರ ಸಚಿವರ ೨ನೇ ದುಂಡುಮೇಜಿನ ಸಭೆ ಇಂದು ಸಿಂಗಾಪುರದಲ್ಲಿ ನಡೆಯಲಿದೆ. ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪಿಯೂಷ್ ಗೋಯಲ್, ಎಸ್. ಜೈಶಂಕರ್ ಮತ್ತು ಅಶ್ವಿನಿ ವೈಷ್ಣವ್ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಚಿವರುಗಳು ತಮ್ಮ ಸಿಂಗಾಪುರದ ಸಹವರ್ತಿಗಳು ಮತ್ತು ನಾಯಕರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಭಾರತ - ಸಿಂಗಾಪುರ ದ್ವಿಪಕ್ಷೀಯ ಸಂಬಂಧಗಳಿಗೆ ಹೊಸ ಕಾರ್ಯಸೂಚಿಯನ್ನು ಹೊಂದಿಸಲು ಸ್ಥಾಪಿಸಲಾದ ಐಎಸ್ಎಂಆರ್ ವಿಶಿಷ್ಟ ಕಾರ್ಯವಿಧಾನವಾಗಿದೆ. ಇದನ್ನು ೨೦೨೨ ರ ಸೆಪ್ಟೆಂಬರ್ ನಲ್ಲಿ ದೆಹಲಿಯಲ್ಲಿ ಉದ್ಘಾಟಿಸಲಾಗಿತ್ತು. ಸಿಂಗಾಪುರವು ಭಾರತಕ್ಕೆ ವಿದೇಶಿ ನೇರ ಹೂಡಿಕೆಯ ಪ್ರಮುಖ ಮೂಲವಾಗಿದ್ದು, ೨೦೨೩-೨೪ರಲ್ಲಿ, ಭಾರತೀಯ ಮಾರುಕಟ್ಟೆಗಳಲ್ಲಿ ೧೧.೭೭ ಶತಕೋಟಿ ಡಾಲರ್ ಹೂಡಿಕೆಯೊಂದಿಗೆ ಅತಿದೊಡ್ಡ ಹೂಡಿಕೆದಾರ ದೇಶವಾಗಿದೆ. ೨೦೦೦ ರ ಏಪ್ರಿಲ್ ನಿಂದ ೨೦೨೪ ರ ಮಾರ್ಚ್ ವರೆಗೆ ಸಿಂಗಾಪುರದಿಂದ ವಿದೇಶಿ ನೇರ ಬಂಡವಾಳ ಹೂಡಿಕೆ ೧೫೯.೯೪ ಶತಕೋಟಿ ಡಾಲರ್‌ನಷ್ಟಿದ್ದು, ದ್ವಿಪಕ್ಷೀಯ ವ್ಯಾಪಾರದಲ್ಲಿ, ಸಿಂಗಾಪುರ ೨೦೨೩-೨೪ರಲ್ಲಿ ಒಟ್ಟು ೩೫.೬೧ ಶತಕೋಟಿ ಡಾಲರ್ ವ್ಯಾಪಾರದೊಂದಿಗೆ ಭಾರತದ ಆರನೇ ಅತಿದೊಡ್ಡ ಜಾಗತಿಕ ವ್ಯಾಪಾರ ಪಾಲುದಾರವಾಗಿದ್ದು, ಇದು ಆಸಿಯಾನ್ ನೊಂದಿಗೆ ಭಾರತದ ಒಟ್ಟು ವ್ಯಾಪಾರದ ಸುಮಾರು ಶೇಕಡ ೨೯ ರಷ್ಟಿದೆ.

<><*<><>*><>

ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಮ್ಮ ಅಮೆರಿಕದ ಪ್ರವಾಸದ ಕೊನೆಯ ದಿನವಾದ ನಿನ್ನೆ ಟೆನ್ನೆಸ್ಸಿಯಾ ಮೆಂಫಿಸ್ ನಲ್ಲಿ ರಾಷ್ಟ್ರೀಯ ನಾಗರಿಕ ಹಕ್ಕುಗಳ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿ ಭಾರತೀಯ ಸಮುದಾಯದೊಂದಿಗೆ ಸಂವಾದ ನಡೆಸಿದರು. ಮೆಂಫಿಸ್, ಅಟ್ಲಾಂಟಾ ಮತ್ತು ನ್ಯಾಶ್ವಿಲ್ಲೆಯಿಂದ ಭಾರತೀಯ ವಲಸಿಗರೊಂದಿಗೆ ಸಂವಾದ ನಡೆಸಿದ ಸಚಿವರು, ಭಾರತೀಯ ಸಮುದಾಯದ ಸಾಧನೆಗಳು ಮತ್ತು ಸಮಾಜ, ವಿಜ್ಞಾನ ಮತ್ತು ಆರ್ಥಿಕತೆಗೆ ನೀಡಿದ ಅವರ ಕೊಡುಗೆಯನ್ನು ಶ್ಲಾಘಿಸಿದರು. ಅಲ್ಲದೆ, ಭಾರತ ಮತ್ತು ಅಮೆರಿಕ ನಡುವಿನ ಜೀವಂತ ಸೇತುವೆಯಾಗಿದ್ದು, ನಿಕಟ ಸಂಬಂಧ ಮತ್ತು ಸದ್ಭಾವನೆಯನ್ನು ಬೆಳೆಸುತ್ತವೆ ಎಂದು ಅವರು ಬಣ್ಣಿಸಿದರು.

<><*<><>*><>

ಶ್ರೀಕೃಷ್ಣನ ಜನ್ಮದಿನವಾದ ಜನ್ಮಾಷ್ಟಮಿಯನ್ನು ಇಂದು ದೇಶಾದ್ಯಂತ ಆಚರಿಸಲಾಗುತ್ತಿದೆ. ದೇವಾಲಯಗಳಿಗೆ ತೆರಳಿ ಶ್ರೀಕೃಷ್ಣನಿಗೆ ಭಕ್ತರು ಪೂಜೆ ಸಲ್ಲಿಸುತ್ತಿದ್ದಾರೆ. ಶ್ರೀ ಕೃಷ್ಣ ಜನ್ಮಾಷ್ಟಮಿ. ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಭಗವಾನ್ ಶ್ರೀಕೃಷ್ಣನ ದಿವ್ಯ ಆದರ್ಶಗಳಿಗೆ ನಮ್ಮನ್ನು ಅರ್ಪಿಸಿಕೊಳ್ಳಲು ಪ್ರೇರೇಪಿಸುತ್ತಿದೆ. ಶ್ರೀಮದ್ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಮತ್ತು ಅರ್ಜುನನ ನಡುವಿನ ಸಂವಾದವು ಎಲ್ಲಾ ಮಾನವೀಯತೆಗೆ ಸ್ಫೂರ್ತಿ ಮತ್ತು ಜ್ಞಾನೋದಯದ ಶಾಶ್ವತ ಮೂಲವಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ. ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಎಲ್ಲರಿಗೂ ಶ್ರೀ ಕೃಷ್ಣ ಜನ್ಮಾಷ್ಟಮಿಯ ಶುಭಾಶಯ ತಿಳಿಸಿದ್ದಾರೆ.

<><*<><>*><>

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಿಂಗಾಪುರದಲ್ಲಿ ಇಂದು ಮಾಜಿ ಹಣಕಾಸು ಕ್ರಿಯಾ ಕಾರ್ಯಪಡೆ - ಎಫ್ಎಟಿಎಫ್ ಅಧ್ಯಕ್ಷ ಟಿ. ರಾಜಾ ಕುಮಾರ್ ಅವರನ್ನು ಭೇಟಿ ಮಾಡಿದರು. ಎಫ್ಎಟಿಎಫ್ ಅಧ್ಯಕ್ಷರಾಗಿ ತಮ್ಮ ಅಧಿಕಾರಾವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಕ್ಕಾಗಿ ಅವರು ಕುಮಾರ್ ಅವರನ್ನು ಅಭಿನಂದಿಸಿದರು. ಸಭೆಯಲ್ಲಿ, ಎಫ್ಎಟಿಎಫ್ ಕಾರ್ಯಕಲಾಪಗಳನ್ನು ನ್ಯಾಯಯುತವಾಗಿ ನಡೆಸಿದಕ್ಕಾಗಿ, ವಿಶೇಷವಾಗಿ ಚರ್ಚೆಗಳು ಮತ್ತು ಭಾರತದ ಪರಸ್ಪರ ಮೌಲ್ಯಮಾಪನ ವರದಿಯನ್ನು ಅಂಗೀಕರಿಸುವ ಸಂದರ್ಭದಲ್ಲಿ ಹಣಕಾಸು ಸಚಿವರು ಮಾಜಿ ಎಫ್ಎಟಿಎಫ್ ಅಧ್ಯಕ್ಷರನ್ನು ಶ್ಲಾಘಿಸಿದರು.

<><*<><>*><>

ದೇಶಾದ್ಯಂತ ೧೯೪ ಜಿಲ್ಲೆಗಳಲ್ಲಿ ವಿಶೇಷವಾಗಿ ದುರ್ಬಲ ಬುಡಕಟ್ಟು ಗುಂಪುಗಳು -ಜನವಸತಿಗಳು ಮತ್ತು ಕುಟುಂಬಗಳನ್ನು ತಲುಪುವ ಉದ್ದೇಶದಿಂದ, ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಆಗಸ್ಟ್ ೨೩ ರಿಂದ ರಾಷ್ಟ್ರವ್ಯಾಪಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಅಭಿಯಾನ ಮತ್ತು ಪ್ರಧಾನ ಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ-ಪ್ರಧಾನಮಂತ್ರಿ-ಜನಮಾನ್ ಗಾಗಿ ಫಲಾನುಭವಿ ಸಂತೃಪ್ತಿ ಶಿಬಿರಗಳನ್ನು ನಡೆಸುತ್ತಿದೆ. ಇದು ೨೦೨೪ ರ ಆಗಸ್ಟ್ ೨೩ರಿಂದ ಸೆಪ್ಟೆಂಬರ್ ೧೦ರವರೆಗೆ ನಡೆಯಲಿದೆ. ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಜುವಾಲ್ ಓರಮ್ ಮತ್ತು ರಾಜ್ಯ ಸಚಿವ ದುರ್ಗಾದಾಸ್ ಅವರು ಪ್ರಧಾನಮಂತ್ರಿ -ಜನಮಾನ್ ಅಡಿಯಲ್ಲಿ ಯೋಜನೆಗಳ ಪ್ರಗತಿಯನ್ನು ಪರಿಶೀಲಿಸಿದರು ಮತ್ತು ಪ್ರಧಾನಮಂತ್ರಿ-ಜನಮಾನ್ ಕುರಿತು ಐಇಸಿ ಅಭಿಯಾನದ ಸಿದ್ಧತೆಯನ್ನು ನಿನ್ನೆ ಕರೆದ ಸಭೆಯಲ್ಲಿ ಪರಿಶೀಲಿಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಜಾರ್ಖಂಡ್‌ನ ಖುಂಟಿ ಜಿಲ್ಲೆಯಿಂದ ಜಂಜತೀಯ ಗೌರವ್ ದಿವಸ ಅಂಗವಾಗಿ- ೨೦೨೩ರ ನವೆಂಬರ್ ೧೫ ರಂದು ಪ್ರಧಾನಮಂತ್ರಿ -ಜನಮಾನ್ ಮಿಷನ್ ಗೆ ಚಾಲನೆ ನೀಡಿದ್ದರು.

<><*<><>*><>

ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರ ಅಧ್ಯಕ್ಷತೆಯಲ್ಲಿ ನಡೆದ ಮಹಾರಾಷ್ಟ್ರ ಸಚಿವ ಸಂಪುಟ ಸಭೆ, ಕೇಂದ್ರದ ಏಕೀಕೃತ ಪಿಂಚಣಿ ಯೋಜನೆಯ ಮಾದರಿಯಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಪರಿಷ್ಕೃತ ರಾಷ್ಟ್ರೀಯ ಪಿಂಚಣಿ ಯೋಜನೆ ಅನುಷ್ಠಾನಕ್ಕೆ ತನ್ನ ಅನುಮೋದನೆ ನೀಡಿದೆ. ರಾಜ್ಯ ಸರ್ಕಾರದ ಪರಿಷ್ಕೃತ ರಾಷ್ಟ್ರೀಯ ಪಿಂಚಣಿ ಯೋಜನೆ ೨೦೨೪ ರ ಮಾರ್ಚ್ ೧ ರಿಂದ ಜಾರಿಗೆ ಬರಲಿದೆ.

<><*<><>*><>

ಭಾರತೀಯ ನೌಕಾಪಡೆಯ ಯುದ್ಧನೌಕೆ ಐಎನ್‌ಎಸ್ ಮುಂಬೈ ಮೂರು ದಿನಗಳ ಭೇಟಿಗಾಗಿ ಇಂದು ಕೊಲಂಬೊ ತಲುಪಿದೆ. ಈ ಭೇಟಿಯು ಶ್ರೀಲಂಕಾದ ಬಂದರಿಗೆ ಐಎನ್‌ಎಸ್ ಮುಂಬೈನ ಮೊದಲ ಭೇಟಿಯಾಗಿದೆ ಮತ್ತು ೨೦೨೪ ರಲ್ಲಿ ಭಾರತೀಯ ನೌಕಾಪಡೆಯ ಹಡಗು ಶ್ರೀಲಂಕಾಕ್ಕೆ ಎಂಟನೇ ಭೇಟಿಯಾಗಿದೆ. ಐಎನ್‌ಎಸ್ ಮುಂಬೈ ತನ್ನ ವಾಸ್ತವ್ಯದ ಸಮಯದಲ್ಲಿ, ಶ್ರೀಲಂಕಾ ವಾಯುಪಡೆ ನಿರ್ವಹಿಸುವ ಡಾರ್ನಿಯರ್ ಕಡಲ ಗಸ್ತು ವಿಮಾನಕ್ಕೆ ಅಗತ್ಯವಾದ ಬಿಡಿಭಾಗಗಳನ್ನು ತಲುಪಿಸಲಿದೆ. ಈ ಭೇಟಿಯು ಶ್ರೀಲಂಕಾ ನೌಕಾಪಡೆಯ ಸಿಬ್ಬಂದಿಗೆ ಐಎನ್‌ಎಸ್ ಮುಂಬೈನ ಪರಿಚಿತ ಪ್ರವಾಸವನ್ನು ಒಳಗೊಂಡಿರುತ್ತದೆ. ಇದು ಕಾರ್ಯಾಚರಣೆಯ ಅಭ್ಯಾಸಗಳನ್ನು ಹಂಚಿಕೊಳ್ಳುವ ಗುರಿಯನ್ನು ಹೊಂದಿದೆ.

<><*<><>*><>

ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಪ್ರೊಫೆಸರ್ ಮುಹಮ್ಮದ್ ಯೂನುಸ್, ಸಾರ್ವತ್ರಿಕ ಚುನಾವಣೆ ನಡೆಸುವ ಸಮಯವು ರಾಜಕೀಯ ನಿರ್ಧಾರದ ವಿಷಯವಾಗಿದೆ ಮತ್ತು ಈ ಮಧ್ಯಂತರ ಆಡಳಿತವು ಎಷ್ಟು ಕಾಲ ಅಧಿಕಾರದಲ್ಲಿ ಉಳಿಯುತ್ತದೆ ಎಂಬುದನ್ನು ಬಾಂಗ್ಲಾದೇಶದ ಜನರು ನಿರ್ಧರಿಸುತ್ತಾರೆ ಎಂದು ಹೇಳಿದ್ದಾರೆ. ಬಾಂಗ್ಲಾದೇಶ ಟೆಲಿವಿಷನ್ ನಲ್ಲಿ ರಾಷ್ಟ್ರವನ್ನುದ್ದೇಶಿಸಿ ಮಾಡಿದ ದೂರದರ್ಶನ ಭಾಷಣದಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

<><*<><>*><>

೨೦೨೪ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟ ಇದೇ ೨೮ ರಿಂದ ಪ್ರಾರಂಭವಾಗಲಿದೆ. ಹನ್ನೊಂದು ದಿನಗಳ ತಡೆರಹಿತ ಕ್ರೀಡಾ ಸ್ಪರ್ಧೆಗಳು ಬುಧವಾರ ಭವ್ಯ ಉದ್ಘಾಟನಾ ಸಮಾರಂಭದ ನಂತರ ಪ್ರಾರಂಭವಾಗಲಿದ್ದು, ಮುಂದಿನ ತಿಂಗಳು ೮ ರವರೆಗೆ ನಡೆಯಲಿದೆ. ಈ ಬಾರಿ ಭಾರತವು ೮೪ ಕ್ರೀಡಾಪಟುಗಳೊಂದಿಗೆ ಕ್ರೀಡಾಕೂಟದ ಇತಿಹಾಸದಲ್ಲೇ ಅತಿದೊಡ್ಡ ತಂಡವನ್ನು ಕಳುಹಿಸುತ್ತಿದೆ. ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಂಡವಿಯಾ, ವಿಡಿಯೋ ಸಂದೇಶದಲ್ಲಿ ಭಾರತೀಯ ತಂಡಕ್ಕೆ ಶುಭ ಕೋರಿದ್ದಾರೆ ಮತ್ತು "ಚೀರ್ ೪ ಭಾರತ್" ಹ್ಯಾಷ್‌ಟ್ಯಾಗ್ ಮೂಲಕ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವಂತೆ ನಾಗರಿಕರನ್ನು ಒತ್ತಾಯಿಸಿದ್ದಾರೆ.

<><*<><>*><>

ವರ್ಷದ ನಾಲ್ಕನೇ ಹಾಗೂ ಕೊನೆಯ ಗ್ರ್ಯಾನ್ ಸ್ಲಾಮ್ ಟೆನಿಸ್ ಟೂರ್ನಿ ಯುಎಸ್ ಓಪನ್ ನ್ಯೂಯಾರ್ಕ್ ನಲ್ಲಿಂದು ಪ್ರಾರಂಭವಾಗಲಿದೆ. ಭಾರತದ ಸವಾಲನ್ನು ಮುನ್ನಡೆಸುತ್ತಿರುವ ಸುಮಿತ್ ನಾಗಲ್ ಮತ್ತು

ರೋಹನ್ ಬೋಪಣ್ಣ ಅವರ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಸುಮಿತ್, ೨೦೧೯ ರ ನಂತರ ಒಂದು ವರ್ಷದಲ್ಲಿ ಎಲ್ಲಾ ನಾಲ್ಕು ಗ್ರ್ಯಾಂಡ್ ಸ್ಲಾಮ್ ಪಂದ್ಯಾವಳಿಗಳ ಸಿಂಗಲ್ಸ್ ಸ್ಪರ್ಧೆಯಲ್ಲಿ ಸ್ಪರ್ಧಿಸಿದ ಮೊದಲ ಭಾರತೀಯ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ. ಸಿಂಗಲ್ಸ್ ವಿಭಾಗದ ಹಾಲಿ ಚಾಂಪಿಯನ್ ನೊವಾಕ್ ಜೊಕೊವಿಕ್, ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ವಿಜೇತ ಸ್ಪೇನ್ ನ ಕಾರ್ಲೋಸ್ ಅಲ್ಕರಾಜ್ ಶುಭಾರಂಭದ ನಿರೀಕ್ಷೆಯಲ್ಲಿದ್ದಾರೆ. ವಿಶ್ವದ ನಂ.೧ ಆಟಗಾರ ಇಟಲಿಯ ಜನಿಕ್ ಸಿನ್ನರ್ ಕೂಡ ಪ್ರಶಸ್ತಿ ಗೆಲ್ಲುವ ಫೇವರಿಟ್ ಎನಿಸಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಅಮೆರಿಕದ ಕೊಕೊ ಗೌಫ್, ಮಾಜಿ ಯುಎಸ್ ಓಪನ್ ಚಾಂಪಿಯನ್ ಪೋಲೆಂಡ್ ನ ಇಗಾ ಸ್ವಿಯಾಟೆಕ್, ವಿಶ್ವದ ೪ನೇ ಶ್ರೇಯಾಂಕಿತ ಆಟಗಾರ್ತಿ ಕಜಕಿಸ್ತಾನದ ಎಲೆನಾ ರಿಬಕಿನಾ ಮತ್ತು ಎರಡು ಬಾರಿ ಆಸ್ಟ್ರೇಲಿಯನ್ ಓಪನ್ ವಿಜೇತೆ ಆರಿನಾ ಸಬಲೆಂಕಾ ಪ್ರಮುಖ ಆಕರ್ಷಣೆಯಾಗಿದ್ದಾರೆ.

<><*<><>*><>

ಬ್ರೆಜಿಲ್ ವಿದೇಶಾಂಗ ವ್ಯವಹಾರಗಳ ಸಚಿವ ಮೌರೊ ವಿಯೆರಾ ನಾಲ್ಕು ದಿನಗಳ ಭಾರತ ಭೇಟಿಗಾಗಿ ನಿನ್ನೆ ಸಂಜೆ ದೆಹಲಿಗೆ ಆಗಮಿಸಿದ್ದಾರೆ. ವಿದೇಶಾಂಗ ಸಚಿವ ವಿಯೆರಾ ಅವರ ಭೇಟಿಯು ಭಾರತ ಮತ್ತು ಬ್ರೆಜಿಲ್ ನಡುವಿನ ಕಾರ್ಯತಂತ್ರದ ಪಾಲುದಾರಿಕೆಗೆ ಮತ್ತಷ್ಟು ಉತ್ತೇಜನ ನೀಡುತ್ತದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ೨.೩೦ ಕ್ಕೆ <>*><>